ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009.
ಅಂತರ್ಜಾಲ : https://kptcl.karnataka.gov.in
ದೂರವಾಣಿ ಸಂಖ್ಯೆ : 080-22212343
ಇ-ಮೇಲ್ ವಿಳಾಸ : director.ahr.kptcl@gmail.com

KPTCL/GMT/CIVL(B9)/88/2023-MANAGER ESTATE (E-92486) 04 JAN 2024
(OLD FILE NO: KPTCL/B9/3707/06-07 VOL-II/A)

**ಅಧಿಕೃತ ಜ್ಞಾಪನ**

**ವಿಷಯ:-** ಕವಿಪ್ರನಿನಿಯ ಪ್ರಸರಣ ಮಾರ್ಗಗಳು ಹಾಗೂ ಉಪಕೇಂದ್ರಗಳ ಸಮೀಕ್ಷೆ ಮತ್ತು ಜಿಯೋ ತಾಂತ್ರಿಕ ಪರೀಕ್ಷೆ ಕೆಲಸಗಳಿಗೆ ಸಂಬಂಧಿಸಿದಂತೆ ಮೆ॥. ವಿನಾಯಕ ಸರ್ವೆಯರ್ಸ್, ಹಿರಿಯೂರು, ಚಿತ್ರದುರ್ಗ ಜಿಲ್ಲೆ, ರವರ ಎಂಪ್ಯಾನಲ್‌ಮೆಂಟ್ ನವೀಕರಣದ ಬಗ್ಗೆ.

**ಉಲ್ಲೇಖ:-**
1. ಕವಿಪ್ರನಿನಿ/ಬಿ9/3707/06-07 ದಿನಾಂಕ 17/04/2012.
2. ಕವಿಪ್ರನಿನಿ/ಬಿ9/3707/06-07 ದಿನಾಂಕ 16/09/2014.
3. ಕವಿಪ್ರನಿನಿ/ಬಿ9/3707/ಸಂ- II /06-07/ ದಿನಾಂಕ 04/11/2020.
4. ಕವಿಪ್ರನಿನಿ/ಬಿ9/3707(29)/06-07/ ದಿನಾಂಕ 05/11/2020.
5. ಮೆ॥. ವಿನಾಯಕ ಸರ್ವೆಯರ್ಸ್, ಹಿರಿಯೂರು, ಚಿತ್ರದುರ್ಗ ಜಿಲ್ಲೆ, ರವರ ಪತ್ರ ದಿನಾಂಕ:31/05/2023 ಮತ್ತು 11/12/2023.

**ಪೀಠಿಕೆ:**

ಉಲ್ಲೇಖ (3) ರ ನಿಗಮ ಕಾರ್ಯಾಲಯದ ಅಧಿಕೃತ ಜ್ಞಾಪನದಲ್ಲಿ ಮೆ॥. ವಿನಾಯಕ ಸರ್ವೆಯರ್ಸ್, ಹಿರಿಯೂರು, ಚಿತ್ರದುರ್ಗ ಜಿಲ್ಲೆ, ರವರನ್ನು, ಕವಿಪ್ರನಿನಿಯಲ್ಲಿ ಸಮೀಕ್ಷೆ ಮತ್ತು ಜಿಯೋ ತಾಂತ್ರಿಕ ಪರೀಕ್ಷೆ ಕೆಲಸಗಳಿಗೆ ದರ್ಜೆ-II ವರ್ಗದಡಿಯಲ್ಲಿ ಎಂಪ್ಯಾನಲ್ ಮಾಡಿಕೊಳ್ಳಲಾಗಿತ್ತು. ಸದರಿ ಅಧಿಕೃತ ಜ್ಞಾಪನದನ್ವಯ ಎಂಪ್ಯಾನಲ್‌ಮೆಂಟ್‌ನ್ನು 3 ವರ್ಷಗಳ ಅವಧಿಗೆ ಮಾಡಲಾಗಿದ್ದು, ಸದರಿ ಅವಧಿ ದಿನಾಂಕ:05/06/2023 ರ ವರೆಗೆ ಮಾನ್ಯತೆ ಹೊಂದಿತ್ತು.

ಮೆ॥. ವಿನಾಯಕ ಸರ್ವೆಯರ್ಸ್, ಹಿರಿಯೂರು, ಚಿತ್ರದುರ್ಗ ಜಿಲ್ಲೆ, ರವರ ತಮ್ಮ ದರ್ಜೆ- II ವರ್ಗದಡಿಯಲ್ಲಿನ ಎಂಪ್ಯಾನಲ್‌ಮೆಂಟ್‌ನ್ನು ಮೇಲ್ದರ್ಜೆಗೆರಿಸಲು ಮತು ಎಂಪ್ಯಾನಲ್‌ಮೆಂಟ್‌ನ ಅವಧಿಯನ್ನು ನವೀಕರಿಸಲು ಕೋರಿದ್ದರು. ಈ ಸಂಬಂಧ, ಸದರಿಯವರ ನವೀಕರಣದ ಕೋರಿಕೆಯನ್ನು ಪರಿಗಣಿಸಲು, ಎಲ್ಲಾ ಪ್ರಸರಣ ವಲಯಗಳ ಮುಖ್ಯ ಇಂಜಿನಿಯರ್ (ವಿ) ರವರುಗಳಿಗೆ ಸದರಿ ಸಂಸ್ಥೆಯು ಕಳೆದ 3 ವರ್ಷಗಳಲ್ಲಿ ನಿರ್ವಹಿಸಿದ ಸಮೀಕ್ಷೆ ಮತ್ತು ಜಿಯೋ ತಾಂತ್ರಿಕ ಪರೀಕ್ಷೆ ಕೆಲಸಗಳ ಬಗ್ಗೆ ಗೌಪ್ಯ ವರದಿಯನ್ನು ಸಲ್ಲಿಸುವಂತೆ ಕೋರಲಾಗಿತ್ತು, ಈ ಸಂಬಂಧ, ಮುಖ್ಯ ಇಂಜಿನಿಯರ್ (ವಿ), ಪ್ರಸರಣ ವಲಯ, ಬೆಂಗಳೂರು ರವರು ಸದರಿ ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ವಲಯ ವ್ಯಾಪ್ತಿಯಲ್ಲಿ ಯಾವುದೆ ಸಮೀಕ್ಷೆ ಕಾರ್ಯ ನಡೆಸಿರುವುದಿಲ್ಲವೆಂದು ವರದಿ ಮಾಡಿರುತ್ತಾರೆ ಹಾಗೂ ಇತರೆ ವಲಯಗಳಿಂದ ಸದರಿ ಸಂಸ್ಥೆಯ ಬಗ್ಗೆ ಯಾವುದೆ ವ್ಯತಿರಿಕ್ತ ಅಭಿಪ್ರಾಯ ಸ್ವೀಕೃತವಾಗಿರುವುದಿಲ್ಲ ಮತ್ತು ಸದರಿ ಸಂಸ್ಥೆ ಕಳೆದ ಮೂರು ವರ್ಷಗಳಲ್ಲಿ ರೂ.2.50 ಲಕ್ಷ ಮೊತ್ತದ ಒಂದು ಸಮೀಕ್ಷೆ ಕಾರ್ಯವನ್ನು ಕವಿಪ್ರನಿನಿ/ಸರ್ಕಾರಿ ಸಂಸ್ಥೆಗಳಲ್ಲಿ ನಿರ್ವಹಿಸದೆ ಇರುವ ಹಿನ್ನೆಲೆಯಲ್ಲಿ ಮೆ॥. ವಿನಾಯಕ ಸರ್ವೆಯರ್ಸ್, ಹಿರಿಯೂರು, ಚಿತ್ರದುರ್ಗ ಜಿಲ್ಲೆ, ರವರ ಹಾಲಿ ದರ್ಜೆ- II ವರ್ಗದಡಿಯಲ್ಲಿ ಎಂಪ್ಯಾನಲ್‌ಮೆಂಟನ್ನು ನವೀಕರಿಸುವ ಸಂಬಂಧದ ಪ್ರಸ್ತಾವನೆಗೆ ನಿಗಮ ಕಾರ್ಯಾಲಯದ ಟಿಪ್ಪಣಿ ದಿನಾಂಕ:30/12/2023 ರಲ್ಲಿ ಅನುಮೋದನೆ ಪಡೆಯಲಾಗಿತ್ತು, ಆದ ಕಾರಣ ಈ ಅಧಿಕೃತ ಜ್ಞಾಪನವನ್ನು ಹೊರಡಿಸಲಾಗಿದೆ.

**ಆದೇಶ:**

ಮೆ॥. ವಿನಾಯಕ ಸರ್ವೆಯರ್ಸ್, ಹಿರಿಯೂರು, ಚಿತ್ರದುರ್ಗ ಜಿಲ್ಲೆ, ರವರನ್ನು ಕವಿಪ್ರನಿನಿಯಲ್ಲಿನ ಪ್ರಸರಣ ಮಾರ್ಗಗಳು ಹಾಗೂ ಉಪಕೇಂದ್ರಗಳ ಸಮೀಕ್ಷೆ ಮತ್ತು ಜಿಯೋ ತಾಂತ್ರಿಕ ಪರೀಕ್ಷೆ ಕೆಲಸಗಳಿಗೆ ದರ್ಜೆ-II ವರ್ಗದಡಿಯಲ್ಲಿ ಮಾಡಿಕೊಳ್ಳಲಾದ ಎಂಪ್ಯಾನಲ್‌ಮೆಂಟನ್ನು ದಿನಾಂಕ:06/06/2023 ರಿಂದ ಅನ್ವಯವಾಗುವಂತೆ ಮುಂದಿನ ಮೂರು ವರ್ಷಗಳ ಅವಧಿಗೆ ನವೀಕರಿಸಲು ಅನುಮೋದನೆ ನೀಡಲಾಗಿದೆ. ಸದರಿ ಅನುಮೋದನೆ ಉಲ್ಲೇಖದಲ್ಲಿನ ನಿಗಮದ ಆದೇಶದಲ್ಲಿ ನಿಗದಿಪಡಿಸಿದ ನಿಯಮಗಳು ಮತ್ತು ಷರತ್ತಿಗೊಳಪಟ್ಟಿರುತ್ತದೆ.

| ಸಂಸ್ಥೆಯ ಹೆಸರು | ನೋಂದಾಯಿತ ಕಚೇರಿ/ ಪತ್ರ ವ್ಯವಹಾರಕ್ಕಾಗಿ ವಿಳಾಸ | ಎಂಪ್ಯಾನಲ್ ಮೆಂಟ್ ದರ್ಜೆ | ಸಿಂಧುತ್ವದ ಅವಧಿ |
|---|---|---|---|
| ಮೆ॥. ವಿನಾಯಕ ಸರ್ವೆಯರ್ಸ್, ಹಿರಿಯೂರು, ಚಿತ್ರದುರ್ಗ ಜಿಲ್ಲೆ | # 26. ಅಕ್ಷರ ನಿಲಯ,5ನೇ ಕ್ರಾಸ್ ಬಸವೇಶ್ವರ ನಗರ,ಹಿರಿಯೂರು – 577598 ಚಿತ್ರದುರ್ಗ ಜಿಲ್ಲೆ. | ದರ್ಜೆ-II | 05/06/2026 |

ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಎಲ್ಲಾ ಅಧೀಕ್ಷಕ ಇಂಜಿನಿಯರುಗಳು (ವಿ), ಕವಿಪ್ರನಿನಿ.
4. ಅಧೀಕ್ಷಕ ಇಂಜಿನಿಯರ್ (ಸಿವಿಲ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ), ಕವಿಪ್ರನಿನಿ, ಕಾವೇರಿ ಭವನ, ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಿದೆ.
6. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಪ್ರಸರಣ ವೃತ್ತ, ಕವಿಪ್ರನಿನಿ.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ), ಬೃ.ಕಾ / ಟಿಎಲ್ ಮತ್ತು ಎಸ್ ಎಸ್ ವಿಭಾಗಗಳು, ಕವಿಪ್ರನಿನಿ.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ (ಸಿವಿಲ್), ಪ್ರಸರಣ ವಲಯ, ಕವಿಪ್ರನಿನಿ.